<u>ಅಸಲು ದಾವಾ ಸಂಖ್ಯೆ: - **147/2018**</u>          ಪಿ.ಡಬ್ಲ್ಯೂ**:-1**

ದಿನಾಂಕಃ **08-02-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಕನ್ನಡ ಓದಲು, ಬರೆಯಲು ಮತ್ತು ಸಹಿ ಮಾಡಲು ಬರುತ್ತದೆ ಎಂದರೆ ಸರಿ. ದಾವಾ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನು ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನಮ್ಮ ತಂದೆಯ ಅಣ್ಣ ತಮ್ಮಂದಿರು ನಾಲ್ಕು ಜನ ಗಂಡ ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಅಂದರೆ ನಾಗೇಂದ್ರಚಾರ್, ನನ್ನ ತಂದೆ ಗಣೇಶಚಾರ್, ಶ್ಯಾಮಾಚಾರ್, ವೀರಚಾರ್, ರತ್ನಮ್ಮ  ಮತ್ತು ಇಂದ್ರಮ್ಮ. ನಮ್ಮ ತಂದೆಗೆ ಓದು ಬರಹ ಬರುವುದಿಲ್ಲ. ನಮ್ಮ ತಂದೆಯವರು ತಮ್ಮ ಸಹಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾಡುತ್ತಾರೆ. ನಾಗೇಂದ್ರಚಾರ್, ಶ್ಯಾಮಾಚಾರ್, ರತ್ನಮ್ಮ ಮತ್ತು ಇಂದ್ರಮ್ಮ ರವರು ಏನು ವಿದ್ಯಾಭ್ಯಾಸ ಮಾಡಿದರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ವೀರಚಾರ್ ರವರು ಅಂಚೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ನಾಗೇಂದ್ರಚಾರ್ ರವರು ಮೃತರಾಗಿರುತ್ತಾರೆ. ಸದರಿಯವರಿಗೆ 4 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ. ನನ್ನ ತಂದೆಗೆ ನಾವು ಒಟ್ಟು 4 ಜನ ಗಂಡು ಮಕ್ಕಳು. ಶ್ಯಾಮಾಚಾರ್ ರವರಿಗೆ 2 ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು. ನನ್ನ ತಂದೆ ಮೃತರಾಗಿರುತ್ತಾರೆ. ಶ್ಯಾಮಾಚಾರ್ ಮತ್ತು ವೀರಚಾರ್ ರವರು ಜೀವಂತ ಇದ್ದರೆ. ವೀರಚಾರ್ ರವರಿಗೆ ಮಕ್ಕಳು ಇರುವುದಿಲ್ಲ.

ದಾವಾ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿಯಾಗಿದ್ದು ನನ್ನಗೂ ನನ್ನ ಅಣ್ಣತಮ್ಮಂದಿರಿಗೂ ಮತ್ತು ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪರವರಿಗೂ ಸಹ ಸಮಾನವಾದ ಹಕ್ಕು ಬಾಧ್ಯತೆ ಇದೆ ಎಂದು ಮತ್ತು ನಮ್ಮ ಕುಟುಂಬದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಯಾವುದೇ

ಭಾಗಂಶ ಆಗಿಲ್ಲ ಎಂದು ನಮೂದಿಸಿದ್ದೀರಾ ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರನ್ನು ಮತ್ತು ನಮ್ಮ ಚಿಕ್ಕಪ್ಪ ಮತ್ತು ದೊಡ್ಡಪ್ಪರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನನಗೆ ಈಗ 49 ವರ್ಷ ವಯಸ್ಸು. ನಾನು ವಯಸ್ಕನಾದ ನಂತರ ನನಗೆ ನನ್ನ ಕುಟುಂಬದ ವ್ಯವಹಾರಗಳು ಸ್ವಲ್ಪ ಮಟ್ಟಿಗೆ ಗೊತ್ತು ಮತ್ತು ಸ್ವಲ್ಪ ಮಟ್ಟಿಗೆ ಗೊತ್ತಿಲ್ಲ. ನಮ್ಮ ಸಹೋದರ ಅತ್ತೆಯವರು ನಮ್ಮ ತಂದೆಯವರ ಜೊತೆ ಮತ್ತು ನನ್ನ ತಂದೆ ಅಣ್ಣತಮ್ಮಂದಿರ ಜೊತೆ ಅನ್ಯೋನ್ಯವಾಗಿರುವುದಿಲ್ಲ ಎಂದರೆ ಸರಿ. ನನ್ನ ಅತ್ತೆಯವರಾದ ರತ್ನಮ್ಮ ಮತ್ತು ಇಂದ್ರಮ್ಮರವರು 2009 ನೇ ಸಾಲಿನಲ್ಲಿ ನನ್ನ ತಂದೆ, ಚಿಕ್ಕಪ್ಪ ದೊಡ್ಡಪ್ಪ ರವರ ಮೇಲೆ ಭಾಗಂಶ ಕೋರಿ ದಾವೆಯನ್ನು ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವೆ ನಂ.138/2009 ರಲ್ಲಿ ಅದ್ದಂತಹ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ, ವೀರಚಾರ್ ಮತ್ತು ಶ್ಯಾಮಾಚಾರ್ ರವರು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರ್ ಎ ನಂ. 64/17 ರಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿರುವುದಿಲ್ಲ. ನಾನು ಈ ಮೊದಲು ಬೆಂಗಳೂರಿನಲ್ಲಿ ವಾಸವಾಗಿದೆ. ತದನಂತರ ಶಿವಮೊಗ್ಗದಲ್ಲಿ ಸುಮಾರು 4 ವರ್ಷಗಳ ಕಾಲ ಇದ್ದು, ಈಗ 2 ತಿಂಗಳಿನಿಂದ ಗೋವಿನಕೋವಿ ಗ್ರಾಮದಲ್ಲಿ ವಾಸವಾಗಿದ್ದೇನೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.